ಇಂದು ದಿ: **30.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **5** ರಿಂದ **9** ನೇ ಪ್ರತಿವಾದಿಗಳ ಪರಃ ಶ್ರೀ ಆರ್. ಕೆ. ವಕೀಲರಿಂದ .

ಹೆಚ್.ಡಿ. ಪುರದ ಪಿ.ಕೆ.ಜಿ. ಬ್ಯಾಂಕಿನಲ್ಲಿ ನನ್ನ ಖಾತೆ ಇರುತ್ತದೆ. ಸದರಿ ಖಾತೆಯಲ್ಲಿ 20 ವರ್ಷದಿಂದ ವ್ಯವಹಾರ ಮಾಡುತ್ತಿದ್ದೇನೆ. ಸದರಿ ಖಾತೆ ಉಳಿತಾಯ ಖಾತೆ ಇರುತ್ತದೆ. ಸದರಿ ಖಾತೆಯ ಕೊನೆಯ ನಾಲ್ಕು ಸಂಖ್ಯೆಗಳು 4781 ಇರುತ್ತವೆ. ವಾದಿ ಆಶಾ ಇವಳ ಖಾತೆಯು ಸದರಿ ಬ್ಯಾಂಕಿನಲ್ಲಿ ಇರುತ್ತದೆ. ಸದರಿ ಖಾತೆಯು ಉಳಿತಾಯ ಖಾತೆ. ಸದರಿ ಖಾತೆ ನಂಬರ್ ನೆನಪು ಇರುವುದಿಲ್ಲ. ಸುಮಾರು 10 ವರ್ಷದಿಂದ ಸದರಿ ಖಾತೆ ಇರುತ್ತದೆ. ಬೇರೆ ಯಾವ ಬ್ಯಾಂಕಿನಲ್ಲಿ ಖಾತೆ ಇರುವುದಿಲ್ಲ. ಹಣಕಾಸಿನ ಏನೇ ವ್ಯವಹಾರ ಇದ್ದರು ನಾನು ಮತ್ತು ಆಶಾ ಬ್ಯಾಂಕ್ ಖಾತೆಯ ಮೂಲಕವೇ ಮಾಡುತ್ತೇವೆ ಮತ್ತು ನಗದು ರೂಪದಲ್ಲಿ ಮಾಡುತ್ತೇವೆ. ನಗದು ವ್ಯಾಪಾರವನ್ನು ಮಾಡಲು ಬ್ಯಾಂಕಿನಿಂದ ಹಣ ತೆಗೆದುಕೊಂಡು ಬರುತ್ತೇವೆ ಎಂದರೆ ಸಾಕ್ಷಿ ಊರಲ್ಲಿ ಕೈ ವ್ಯಾಪಾರ ಮಾಡಿದ್ದರ ಹಣದ ಮೂಲಕ ಮಾಡುತ್ತೇವೆ ಎಂದು ಹೇಳುತ್ತಾರೆ. ವಾದಿ ಆಶಾ ಇವಳದು ನಮ್ಮ ಗ್ರಾಮದಲ್ಲಿ ಯಾರೊಂದಿಗು ಕೈ ವ್ಯವಹಾರ ಇರುವುದಿಲ್ಲ. ಸದರಿ ನಮ್ಮ ಗ್ರಾಮದಲ್ಲಿ ನನ್ನ ಕೈ ವ್ಯವಹಾರದ ಬಗ್ಗೆ ದಾಖಲೆಗಳು ಇರುವುದಿಲ್ಲ. ಕೈ ವ್ಯವಹಾರ ಇಲ್ಲದೆ ಇರುವ ಕಾರಣ, ನನ್ನ ಬಳಿ ದಾಖಲೆಗಳು ಇಲ್ಲ ಎನ್ನುವುದು ನಿಜ. ವಾದಿ ಆಶಾ ಇವಳ ಸ್ವಂತ ಆದಾಯದ ಮೂಲಗಳು ಯಾವುವು ಇರುವುದಿಲ್ಲ. ವಾದಿ ಆಶಾ ಇವಳು ಯಾವುದೇ ವ್ಯವಹಾರ ಮಾಡಿರುವ ಕುರಿತು ಬ್ಯಾಂಕಿನಲ್ಲಿ ಸಾಲ ಇರುವುದಿಲ್ಲ. ಅದೇ ರೀತಿ ಯಾರ ಬಳಿಯು ಸಾಲ ಮಾಡಿಲ್ಲ. ವಾದಿ ಆಶಾ ಅವಳ ಸ್ವಂತ ಆದಾಯ ಮೂಲವನ್ನು ತೋರಿಸಲು ನಮ್ಮ ಬಳಿ ಯಾವ ದಾಖಲೆ ಇಲ್ಲ ಎನ್ನುವುದು ನಿಜ. ಕುಟುಂಬದ ಆದಾಯವನ್ನು ನಾವು ಲೆಕ್ಕಪತ್ರ ಇಟ್ಟಿಲ್ಲ. ನಮ್ಮ ಕುಟುಂಬಕ್ಕೆ ಯಾವ ಮೂಲದಿಂದ ಆದಾಯದ ಬಂದಿದೆ ಎನ್ನುವುದಕ್ಕೆ ದಾಖಲೆಗಳು ಇರುವುದಿಲ್ಲ.

ದಿಃ 04.04.2019 ರಂದು, ದಿಃ 03.07.2019 ರಂದು ಮತ್ತು ದಿಃ 11.07.2019 ರಂದು ವಾದಿ ಆಶಾ ಇವಳ ಬಳಿ ಆದಾಯದ ಮೂಲ ಇದ್ದ ಕುರಿತು ದಾಖಲೆ ಇರುವುದಿಲ್ಲ. ಸದರಿ ದಿನಾಂಕಗಳಂದು ನಮ್ಮ ಕುಟುಂಬಕ್ಕೆ ಆದಾಯ ಇದ್ದ ಕುರಿತು ದಾಖಲೆಗಳು ಇರುವುದಿಲ್ಲ. ವಾದಿ ಆಶಾ ಇವಳು ದಿಃ 04.04.2019 ರಂದು ನಿಪಿಃ02 ರಂತೆ ಕ್ರಯದ ಕರಾರಿನ ವ್ಯವಹಾರ ನಡೆಯುವಾಗ ಏನೇನು ವ್ಯವಹಾರದ ಷರತ್ತುಗಳನ್ನು ಮಾಡಿಕೊಂಡಿದ್ದರು ಎನ್ನುವುದನ್ನು ತಿಳಿದುಕೊಂಡಿರುತ್ತೇನೆ. ನಿಪಿಃ2 ರಲ್ಲಿ ಇರುವ ಷರತ್ತುಗಳನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಹೇಳಿರುತ್ತೇವೆ. 3 ತಿಂಗಳಲ್ಲಿ ಉಳಿದ ಹಣ ಪಡೆದು ನೊಂದಣಿ ಮಾಡಿಸಿಕೊಡಬೇಕು ಎಂದು ನಿಪಿಃ02 ರಲ್ಲಿ ಷರತ್ತು ಇರುತ್ತದೆ. ನಿಪಿಃ2 ರಲ್ಲಿ ಇರುವ ಕರಾರಿನ ಒಡಂಬಡಿಕೆಗೆ ವಿರುದ್ಧವಾಗಿ ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎರಡನೇ ಪುಟದ ಎರಡನೇ ಕಂಡಿಕೆಯಲ್ಲಿ 8 ರಿಂದ 16 ನೇ ಸಾಲುಗಳಲ್ಲಿ ಇರುವಂತೆ ಹೇಳಿರುತ್ತೇನೆ. ಅದೇ ರೀತಿ ವಾದಪತ್ರದ 2 ನೇ ಪುಟದ 2 ನೇ ಕಂಡಿಕೆಯಲ್ಲಿ 8 ರಿಂದ 19 ನೇ ಸಾಲುಗಳಲ್ಲಿ ಇರುವಂತೆ ಹೇಳಿರುತ್ತೇವೆ.

**ಮುಂದುವರೆದ ಪಾಟೀ ಸವಾಲು ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.